687 ಶ್ರೀ ಬಿ.ಐ. ಪಾಟೀಲ್: ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆಯ ಬೆಳಗಾಂ ಮತ್ತು ಖಾನಾಪುರ ತಾಲ್ಲೂಕಿಗಳಲ್ಲಿ ಪ್ರಾಥಮಿಕ ಶಾಲೆಗಳಲ್ಲಿನ ಮರಾಠಿ ಶಿಕ್ಷಕರ ಖಾಲಿ ಹುದ್ದೆಗಳ ಸಂಖ್ಯೆ ಎಷ್ಟು;

ಆ) ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು;

a) The number of vacant posts of Marathi teachers in the primary Schools of Belgaum and khanapur Talukas in Belgaum District;

b) The steps taken by the Government for filling up those posts;

ಎಚ್.ಡಿ.ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು.)

1) ಬೆಳಗಾಂ ತಾಲ್ಲೂಕು - 02

2) ಖಾನಾಪುರ ತಾಲ್ಲೂಕು -56

ಒಟ್ಟು 58

ಅ) 1986 ಸಾಮಾನ್ಯ ನೇಮಕಾತಿಯಡಿ ಪ್ರಾಥಮಿಕ ಶಾಲೆಗಳಲ್ಲಿ ದಿನಾಂಕ 30-9-96ರವರೆಗೆ ಖಾಲಿ ಇದ್ದ ಹುದ್ದೆಗಳನ್ನು ಭರ್ತಿ ಮಾಡಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ.

1) Belgaum Taluk -02

2) Khanapur Taluk -56

Total 58

b) Action has already been taken to fill up all the vacant posts of primary school teachers existed as on 31/09/1996 through 1996 recruitment.

SRI B.I. PATIL: Mr Speaker Sir, the answer given by the Hon'ble Minister is misleading. In the answer given, the Hon'ble Minister has stated that only two posts in Belgaum taluk are vacant. It is incorrect. In khanapur taluk, it is given that nearly about 57 posts are vacant. These posts should filled up. The Government does not take action. The Marathi speaking people, especially in border areas, are against the government. The posts should be filled up Immediately.

ಶ್ರೀ ಜಿ. ಗೋವಿಂದೇಗೌಡ:- ಅಧ್ಯಕ್ಷರೇ ಬೆಳಗಾಂ ತಾಲ್ಲೂಕ್‌ನಲ್ಲಿ ಖಾಲಿ ಇರುವ 62 ಹುದ್ದೆಗಳು ಖಾನಾಪುರ ತಾಲ್ಲೂಕಿನಲ್ಲಿ 56 ಹುದ್ದೆಗಳನ್ನು ಈಗಾಗಲೇ ಭರ್ತಿ ಮಾಡಲು ಕ್ರಮ ತೆಗೆದುಕೊಂಡಿದ್ದು ಜಿಲ್ಲಾಧಿಕಾರಿ ಮತ್ತು ಸಂಬಂಧಪಟ್ಟವರಿಂದ ಸರ್ಟಿಫಿಕೇಟ್ ಬರಬೇಕಾಗಿದೆ. ಅವರಿಂದ ಆದಾಯ ಸರ್ಟಿಫಿಕೇಟ್ ಮತ್ತು ಜಾತಿ ಪ್ರಮಾಣ ಪತ್ರ ಬಂದ ತಕ್ಷಣ ಈ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡುವ ವ್ಯವಸ್ಥೆಯನ್ನು ಸದ್ಯದಲ್ಲಿ ಮಾಡುತ್ತೇನೆ.

718 ಶ್ರೀ ಎಂ.ದಿವಾಕರ ಬಾಬು:

ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಗೌರವಧನ ಪಡೆದು ಕಾರ್ಯ ನಿರ್ವಹಿಸುತ್ತಿರುವ ಶಾಲಾ ಶಿಕ್ಷಕರ ಸಂಖ್ಯೆ ಎಷ್ಟು;

ಆ) ಅವರು ಯಾವ ವರ್ಷದಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ;

ಇ) ಅವರನ್ನು ಖಾಯಂಗೊಳಿಸಲು ಸರ್ಕಾರವು ಯಾವ ಕ್ರಮ ಕೈಗೊಂಡಿದೆ;

ಈ) ಹಾಗಿದ್ದಲ್ಲಿ ಅವರನ್ನು ಯಾವಾಗ ಖಾಯಂಗೊಳಿಸಲಾಗುವುದು;

ಎಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು.)

ಅ) ಪ್ರಾಥಮಿಕ ಶಾಲೆಗಳು-125 ಗೌರವಧನ ಶಿಕ್ಷಕರು.

ಪ್ರೌಢ ಶಾಲೆಗಳು -278 ಗೌರವಧನ ಶಿಕ್ಷಕರು.

ಆ) ಪ್ರಾಥಮಿಕ ಶಾಲೆಗಳಲ್ಲಿ 1988-89 ರಿಂದ ಕಾರ್ಯನಿರ್ವಸುತ್ತಿದ್ದಾರೆ.

ಇ) ಪ್ರೌಢ ಶಾಲೆಗಳಲ್ಲಿ ಕೆಲವರು 1994-95 ರಿಂದ ಮತ್ತೆ ಕೆಲವರು 1988-89, 1989-90, 1990-91 ಮತ್ತು 1991-92ರಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ.

ಈ)ಗೌರವ ಶಿಕ್ಷಕರನ್ನು ನೇರವಾಗಿ ಖಾಯಂಗೊಳಿಸಲು ಸಂಬಂಧಪಟ್ಟ ನಿಯಮಗಳಲ್ಲಿ ಅವಕಾಶವಿರುವುದಿಲ್ಲ. ಆದಾಗ್ಯೂ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಹಿನ್ನೆಲೆಯಲ್ಲಿ ಸದರಿ ಶಿಕ್ಷಕರು ಸಲ್ಲಿಸಿದ ಸೇವಾವಧಿಗೆ ಅನುಗುಣವಾಗಿ ಕೃಪಾಂಕ ನೀಡಿ ಇತರೆ ಅರ್ಹ ಅಭ್ಯರ್ಥಿಗಳ ಜೊತೆಗೆ ನೇಮಕಾತಿಗೆ ಪರಿಗಣಿಸಿ ಅವರಲ್ಲಿ ಅರ್ಹರಾದವರನ್ನು ಸಕ್ರಮ ನೇಮಕಾತಿ ಮಾಡಲಾಗುತ್ತಿದೆ.

ಶ್ರೀ ಅಲ್ಲಂವೀರಭದ್ರಪ್ಪ (ಶ್ರೀ ಎಂ. ದಿವಾಕರ ಬಾಬು ರವರ ಪರವಾಗಿ):- ಗೌರವಧನ ಶಿಕ್ಷಕರು ರಾಜ್ಯದಲ್ಲಿ ಕೇವಲ 300-400 ಜನ ಇದ್ದಾರೆ. ಕಳೆದ 8-10 ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಆದರೆ ಸರ್ಕಾರ ಸಂದರ್ಶನದ ಸಮಯದಲ್ಲಿ ಅವರಿಗೆ ಹೆಚ್ಚಿನ ಆದ್ಯತೆ ಕೊಟ್ಟು ಸೆಲೆಕ್ಟ್ ಮಾಡುತ್ತೇವೆಂದು ಹೇಳಿದ್ದರು. ಇನ್ನು 2-3 ವರ್ಷವಾದರೆ ಅವರಿಗೆ ನಿವೃತ್ತಿಯಾಗುವ